CC No.3064/2025
CW-2  PW-2

**1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು  ಜೆ.ಎಂ.ಎಫ್.ಸಿ ನ್ಯಾಯಾಲಯ, ಸೊರಬ**

**ಸಿ ಸಿ ನಂ. 3064/2025**

**ಹೆಸರು** :- **ಅನುಪಮ**

**ಗಂಡನ ಹೆಸರು** :- **ಜಗದೀಶ ಗೌಡ**

**ವಯಸ್ಸು** :- **38 ವರ್ಷ**

**ಉದ್ಯೋಗ** :- **ವ್ಯವಸಾಯ**

**ಸ್ಥಳ** :- **ನೆಲ್ಲಿಕೊಪ್ಪ**

**ದಿನಾಂಕಃ 03.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಚಾಸಾ-1 ನನ್ನ ಗಂಡ. ಚಾಸಾ-3 ಮತ್ತು 4 ನನ್ನ ಭಾವನ ಮಕ್ಕಳು. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಆರೋಪಿ ಮತ್ತು ನಮ್ಮ ನಡುವೆ ಯಾವುದೇ ಗಲಾಟೆ ಆಗಿರುವುದಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯು ಅಭಿಯೋಜನಾ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಸಾಕ್ಷಿಯನ್ನು  ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಸಾಕ್ಷಿಯು ಅಭಿಯೋಜನಾ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದ ಕಾರಣ ಪಾಟಿ ಸವಾಲಿಗೆ ಅನುಮತಿ ನೀಡಲಾಯಿತು).**

CC No.3064/2025
CW-2 PW-2

**ಪಾಟಿ ಸವಾಲುಃ ಮಾನ್ಯ ಸ.ಸ.ಅಭಿಯೋಜಕವರಿಂದಃ**

ಸೊರಬ ತಾಲ್ಲೂಕಿನ ಸೂರಗಣಿ ಗ್ರಾಮದ ಸ.ನಂ.93/1 ರಲ್ಲಿ ನಮಗೆ ಸೇರಿದ ಸುಮಾರು 6 ಎಕರೆ 20 ಗುಂಟೆ ಜಮೀನು ಇದ್ದು, ಸದರಿ ಜಮೀನು ಚಾಸಾ–1 ಮತ್ತು ಅವರ ಸಹೋದರರ ಜಂಟಿ ಖಾತೆ ಇದ್ದು, ನಾವು ಸುಮಾರು 25 ವರ್ಷಗಳಿಂದ ಜಮೀನಿನಲ್ಲಿ ಉಳುಮೆ ಮಾಡುತ್ತಾ ಬಂದಿರುತ್ತೇವೆ. ದಿಃ 17.06.2025 ರಂದು ನಮ್ಮ ಜಮೀನಿನಲ್ಲಿದ್ದ ಬದುವನ್ನು ಶಿರಸಿ ತಾಲ್ಲೂಕು ಸಂತೋಳ್ಳಿ ಗ್ರಾಮದ ವಾಸಿಯಾದ ಆರೋಪಿತರು ನಮ್ಮ ಜಮೀನಿಗೆ ಮಧ್ಯಂತರ ಆದೇಶ ಇದ್ದರೂ ಸಹ ಜೆ.ಸಿ.ಬಿ.ಯಿಂದ ಸದರಿ ಬದುವನ್ನು ಒಡೆದು ಹಾಳುಮಾಡಿರುತ್ತಾರೆ. ಸದರಿ ಒಡೆದ ಬದುವನ್ನು ಸರಿಮಾಡಲೆಂದು ದಿಃ18.06.2025 ರಂದು ಬೆಳಗ್ಗೆ 10.30 ಗಂಟೆ ಸಮಯಕ್ಕೆ ನಾನು ಮತ್ತು ಚಾಸಾ–1 ರವರು ಜಮೀನಿಗೆ ಹೋದಾಗ ಆರೋಪಿತರು ಏಕಾಏಕಿ ಅತಿಕ್ರಮ ಪ್ರವೇಶ ಮಾಡಿ 1 ನೇ ಆರೋಪಿತನು ದೊಣ್ಣೆಯಿಂದ ಚಾಸಾ–1 ರವರ ಮೈಕೈಗೆ ಎದೆಗೆ ಹೊಡೆದಿರುತ್ತಾನೆ ಅಂದರೆ ಸರಿಯಲ್ಲ. 2 ಮತ್ತು 3 ನೇ ಆರೋಪಿತರು ಚಾಸಾ–1 ರವರನ್ನು ಹಿಡಿದು ಎಳದಾಡಿ ಕೈಗಳನ್ನು ತಿರುವಿರುತ್ತಾರೆ ಅಂದರೆ ಸರಿಯಲ್ಲ. 4 ನೇ ಆರೋಪಿತಳು ನನಗೆ ಕೈಗಳಿಂದ ಹೊಡೆದು ಸೀರೆಯನ್ನು ಹಿಡಿದು ಎಳೆದು ಹರಿದಿರುತ್ತಾರೆ ಅಂದರೆ ಸರಿಯಲ್ಲ. ಆಗ ಪಕ್ಕದ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಚಾಸಾ–3 ಮತ್ತು 4 ರವರು ಜಗಳವನ್ನು ಬಿಡಿಸಿರುತ್ತಾರೆ ಅಂದರೆ ಸರಿಯಲ್ಲ. ಆರೋಪಿತರು ಸ್ಥಳದಿಂದ ಹೋಗುವಾಗ ಜೀವಬೆದರಿಕೆ ಹಾಕಿರುತ್ತಾರೆ ಅಂದರೆ ಸರಿಯಲ್ಲ. ಆರೋಪಿತರ ಹಲ್ಲೆಯಿಂದ ಚಾಸಾ–1 ರವರು ಚಿಕಿತ್ಸೆ

ಪಡೆದುಕೊಂಡಿರುತ್ತಾರೆ ಅಂದರೆ ಸರಿಯಲ್ಲ. ದಿಃ 20.06.2025 ರಂದು ಈಗ ಓದಿ ಹೇಳಿದಂತೆ ಹೇಳಿಕೆಯನ್ನು ನೀಡಿರುತ್ತೇನೆ ಅಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ–6 ಎಂದು ಗುರುತಿಸಲಾಯಿತು. ಈ ದಿನ ನಾನು ಮತ್ತು ಚಾಸಾ–1 ರವರು ಆರೋಪಿತರೊಂದಿಗೆ ರಾಜಿ ಮಾಡಿಕೊಂಡಿರುತ್ತೇವೆ ಅಂದರೆ ಸರಿ. ಆ ಕಾರಣ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟಿ ಸವಾಲುಃ** ಆರೋಪಿ ಪರ ವಕೀಲರು ಸಾಕ್ಷಿಯ ಪಾಟಿ ಸವಾಲು ಇಲ್ಲ ಎಂದು ನುಡಿದಿದ್ದು, ಸಾಕ್ಷಿಯ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ ಇಲ್ಲಃ**

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**

**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಸಿ/ಸಿ 1 ನೇ ಹೆಚ್ಚುವರಿ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**